**ಸುದ್ದಿ ಸಂಚಯ**

# ರಾಮಕೃಷ್ಣ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವದ ಉದ್ಘಾಟನೆ: ಬೇಲೂರು ಮಠ






ಸ್ವಾಮಿ ವಿವೇಕಾನಂದರು ೧೮೯೭ರ ಮೇ ೧ರಂದು ರಾಮಕೃಷ್ಣ ಮಿಷನ್ನನ್ನು ಸ್ಥಾಪಿಸಿದರು. ಹಾಗೆ ಸ್ಥಾಪಿತವಾದ ಮಿಷನ್ ಜನರಿಗೆ ಸೇವೆ ಸಲ್ಲಿಸುತ್ತ, ೧೨೫ ವರ್ಷಗಳನ್ನು ಪೂರೈಸಿದೆ.

೨೦೨೨ರ ಮೇ ೧ರಂದು ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ನಿನ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜೀ ಮಹಾರಾಜ್ ಅವರು ಒಂದು ವರ್ಷ ಪೂರ್ತಿ ನಡೆಯುವ ಮಿಷನ್ನಿನ ೧೨೫ನೇ ವಾರ್ಷಿಕೋತ್ಸವವನ್ನು ಉದ್ಘಾಟಿಸಿದರು. ಬೇಲೂರು ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೃಹತ್ ಸಂಖ್ಯೆಯಲ್ಲಿ ಸಾರ್ವಜನಿಕರು ನೆರೆದಿದ್ದರು.

ಸಾಯಂಕಾಲ ೪ಕ್ಕೆ ವೇದಘೋಷಗಳೊಂದಿಗೆ ಸಾರ್ವಜನಿಕ ಸಭೆ ಆರಂಭವಾಯಿತು. ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದರು ಸ್ವಾಗತ ಕೋರಿದರು. ಬಳಿಕ ಪರಮಾಧ್ಯಕ್ಷರು ದೀಪ ಬೆಳಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.'ಉದ್ಬೋಧನ ಕಾರ್ಯಾಲಯ'ವು ಪ್ರಕಟಿಸಿದ ಬಂಗಾಳಿ ಗ್ರಂಥದ ಬಿಡುಗಡೆಯನ್ನು ಕೂಡ ಅವರು ನೆರವೇರಿಸಿದರು.

೧೮೯೭ರ ಮೇ ೧ರಂದು ಹಾಗೂ ೫ರಂದು ನಡೆದ ಎರಡು ಸಭೆಗಳ ವರದಿಯನ್ನು ಸಹ-ಕಾರ್ಯದರ್ಶಿಗಳಾದ ಸ್ವಾಮಿ ಸತ್ಯೇಶಾನಂದರು ಮಂಡಿಸಿದರು. ಮತ್ತೋರ್ವ ಸಹ ಕಾರ್ಯದರ್ಶಿಗಳಾದ ಸ್ವಾಮಿ ಬಲಭದ್ರಾನಂದರು ಮುಂದಿನ ಒಂದು ವರ್ಷ ಪೂರ್ತಿ ನಡೆಯಲಿರುವ ವಿವಿಧ ಕಾರ್ಯಯೋಜನೆಗಳನ್ನು ಕುರಿತ ವರದಿಯನ್ನು ಮಂಡಿಸಿದರು. ಸ್ವಾಮಿ ತತ್ತ್ವವಿದಾನಂದರು (ಸಹ-ಕಾರ್ಯದರ್ಶಿಗಳು) ಮೇ ೧ನೇ ದಿನದ ಮಹತ್ವವನ್ನು ಸಂಸ್ಕೃತದಲ್ಲಿ ವಿವರಿಸಿದರು.

ರಾಮಕೃಷ್ಣ ಮಿಷನ್ನಿನ ಸದಸ್ಯರಾದ ಶ್ರೀ ರಾಮಸೇವಕ ಬಂದೋಪಾಧ್ಯಾಯ ಅವರು ಮಿಷನ್ನಿನ ಸೇವಾಕಾರ್ಯಗಳ ಹಿಂದಿರುವ ಆದರ್ಶವನ್ನು ಬಣ್ಣಿಸಿದರು.

ಸಂಘದ ಉಪಾಧ್ಯಕ್ಷರಾದ ಸ್ವಾಮಿ ಪ್ರಭಾನಂದಜಿ ಮಹಾರಾಜ್ ಅವರ ಸಂದೇಶವನ್ನು ವಾಚಿಸಲಾಯಿತು. ಇತರ ಉಪಾಧ್ಯಕ್ಷರುಗಳಾದ ಸ್ವಾಮಿ ಭಜನಾನಂದಜಿ ಮಹಾರಾಜ್ ಹಾಗೂ ಸ್ವಾಮಿ ಗಿರೀಶಾನಂದಜಿ ಮಹಾರಾಜ್ ಅವರು ಈ ಸಂದರ್ಭದಲ್ಲಿ ಮಾತನಾಡಿದರು.

ಸ್ವಾಮಿ ಬೋಧಸಾಧಾನಂದಜಿ ಮಹಾರಾಜ್ (ಸಹ-ಕಾರ್ಯದರ್ಶಿ) ಅವರು ವಂದನಾರ್ಪಣೆ ಮಾಡಿದರು. ಸಂಧ್ಯಾರತಿಯ ನಂತರ ಇಟಾನಗರ ರಾಮಕೃಷ್ಣ ಮಿಷನ್ ಆಸ್ಪತ್ರೆಯ ಸ್ವಾಮಿ ಕೃಪಾಕರಾನಂದಜಿಯವರ ಶಾಸ್ತ್ರೀಯ ಸಂಗೀತದೊಂದಿಗೆ ಕಾರ್ಯಕ್ರಮ ಸಮಾಪ್ತಿಗೊಂಡಿತು. ಉದ್ಘಾಟನೆಯ ಕಾರ್ಯಕ್ರಮದ ಸಂದರ್ಭದಲ್ಲಿ , ಬೆಳಗಿನ ಹೊತ್ತು ಭಕ್ತ ಸಮ್ಮೇಳನ ನಡೆದಿತ್ತು. ಇಡೀ ದಿನದ ಕಾರ್ಯಕ್ರಮದಲ್ಲಿ ಸುಮಾರು ೮೦೦೦ ಮಂದಿ ಭಾಗವಹಿಸಿದ್ದರು.








Managing Editor : Swami Muktidananda    Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020